**<u>ಪತ್ರಿಕಾ ಪ್ರಕಟಣೆಗಾಗಿ</u>**

# 12 ಹೊಸ ನಗರಗಳಿಗೆ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಸೇವೆ ಆರಂಭ

- **ಹಬ್ಬದ ಸಂದರ್ಭದಲ್ಲಿ ಕಿರಾಣಗಳು ಮತ್ತು ಎಂಎಸ್‌ಎಂಇಗಳಿಗೆ ಬೆಂಬಲ ನೀಡಲಿರುವ ಫ್ಲಿಪ್‌ಕಾರ್ಟ್**
- **12 ಹೊಸ ನಗರಗಳಲ್ಲಿ ಫ್ಯಾಷನ್ ವಿಭಾಗದ ಸೇವೆ ಆರಂಭ**
- **ಸಾವಿರಾರು ಕಿರಾಣಗಳು ಮತ್ತು ಎಸ್‌ಎಂಬಿಗಳಿಗೆ ಡಿಜಿಟಲ್ ಕಾಮರ್ಸ್‌ಗೆ ಪ್ರವೇಶಿಸಲು ಅವಕಾಶ**

ಬೆಂಗಳೂರು, ಸೆಪ್ಟೆಂಬರ್ 24, 2020: ಭಾರತದ ದೇಶೀಯ ಸಂಸ್ಥೆಯಾಗಿರುವ ಫ್ಲಿಪ್‌ಕಾರ್ಟ್ ಗ್ರೂಪ್‌ನ ಡಿಜಿಟಲ್ ಬಿ2ಬಿ ಮಾರ್ಕೆಟ್‌ಪ್ಲೇಸ್ ಆಗಿರುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ತನ್ನ ಕಾರ್ಯಾಚರಣೆಯನ್ನು ಇನ್ನೂ 12 ಹೊಸ ನಗರಗಳಿಗೆ ವಿಸ್ತರಣೆ ಮಾಡಿದೆ. ರೀಟೇಲ್ ಪರಿಸರ ವ್ಯವಸ್ಥೆಗೆ ಒನ್-ಸ್ಟಾಪ್ ಡಿಜಿಟಲ್ ಮಾರ್ಕೆಟ್‌ಪ್ಲೇಸ್ ಶಕ್ತಗೊಳಿಸುವ ಪರಿಹಾರವಾಗಿದ್ದು, ಸಣ್ಣ ವ್ಯವಹಾರಗಳಿಗೆ ಗಣನೀಯ ಮೌಲ್ಯದಲ್ಲಿ ವಿಸ್ತಾರವಾದ ಆಯ್ಕೆಯ ಉತ್ಪನ್ನಗಳನ್ನು ನೀಡುತ್ತದೆ. ಈ ನಗರಗಳಲ್ಲಿ ಫ್ಯಾಷನ್ ವಿಭಾಗವನ್ನು ವಿಸ್ತರಣೆ ಮಾಡಿದ್ದು, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಕಿರಾಣಗಳು ಮತ್ತು ಎಂಎಸ್‌ಎಂಇಗಳನ್ನು ಡಿಜಿಟಲೀಕರಣಗೊಳಿಸುವ ಮೂಲಕ ಅವುಗಳನ್ನು ವೇಗವಾಗಿ ಬೆಳವಣಿಗೆ ಹೊಂದುವಂತೆ, ತಮ್ಮ ಗ್ರಾಹಕರನ್ನು ಉಳಿಸಿಕೊಳ್ಳಲು ಹಾಗೂ ತಮ್ಮ ಲಾಭಾಂಶದ ಪ್ರಮಾಣವನ್ನು ಸುಧಾರಣೆ ಮಾಡಿಕೊಳ್ಳಲು ನೆರವಾಗುತ್ತದೆ.

ಹಬ್ಬದ ಋತು ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಇನ್ನು ಮುಂದೆ ಘಾಜಿಯಾಬಾದ್, ಫರೀದಾಬಾದ್, ಮೈಸೂರು, ಚಂಡೀಘಡ ಟ್ರೈಸಿಟಿ, ಮೀರತ್, ಆಗ್ರಾ, ಜೈಪುರ, ಥಾಣೆ-ಭೀವಂಡಿ-ಉಲ್ಲಾಸ್‌ನಗರ, ಗ್ರೇಟರ್ ಮುಂಬೇ, ವಸಾಯಿ-ವಿರಾರ್-ಮಿರಾ-ಭಯಾನದರ್, ಥಾಣೆ (ಕಲ್ಯಾಣ್-ಡೊಂಬಿಲಿವಿ ಮತ್ತು ಥಾಣೆ (ನವಿ ಮುಂಬೈ) ನಗರಗಳಲ್ಲಿ ಕಾರ್ಯಾಚರಣೆಯನ್ನು ನಡೆಸಲಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಹಿರಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಆದರ್ಶ್ ಮೆನನ್ ಅವರು ಮಾತನಾಡಿ, "ಹಬ್ಬದ ಋತುವಿಗೆ ನಾವು ಪ್ರವೇಶ ಮಾಡುತ್ತಿರುವ ಈ ಸಂದರ್ಭದಲ್ಲಿ 12 ನಗರಗಳಲ್ಲಿ ನಮ್ಮ ಕಾರ್ಯಾಚರಣೆಯನ್ನು ಆರಂಭಿಸುತ್ತಿರುವುದಕ್ಕೆ ಸಂತಸವೆನಿಸುತ್ತಿದೆ. ಈ ನಗರಗಳಲ್ಲಿನ ಎಂಎಸ್‌ಎಂಇಗಳು ಮತ್ತು ಕಿರಾಣಗಳಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಸೃಷ್ಟಿ ಮಾಡುವ ಉದ್ದೇಶವನ್ನು ಹೊಂದಿದ್ದೇವೆ. ಟ್ರೆಂಡಿ ಜೈಪುರಿ ಕುರ್ತೀಸ್‌ನಿಂದ ಸದಾ ಜನಪ್ರಿಯವಾಗಿರುವ ಮೈಸೂರು ರೇಷ್ಮೆ ಸೀರೆವರೆಗೆ ಸಣ್ಣ ಉದ್ದಿಮೆಗಳು ಡಿಜಿಟಲ್ ರೂಪಾಂತರವನ್ನು ಹೊಂದಲು ಮತ್ತು ಮತ್ತಷ್ಟು ಹೆಚ್ಚು ದೃಢವಾದ ವ್ಯವಹಾರಗಳಾಗಿ ಹೊರಹೊಮ್ಮಲು ಸಹಾಯ ಮಾಡುವ ಗುರಿಯನ್ನು ನಾವು ಹೊಂದಿದ್ದೇವೆ. ಈ ಕಾರ್ಯಕ್ರಮವನ್ನು ಆರಂಭಿಸಿದಾಗಿನಿಂದ ನಾವು ಹಲವಾರು ಮುಂಚೂಣಿಯಲ್ಲಿರುವ ಬ್ರ್ಯಾಂಡ್‌ಗಳೊಂದಿಗೆ ಪಾಲುದಾರಿಕೆಯನ್ನು ಮಾಡಿಕೊಂಡಿದ್ದೇವೆ ಮತ್ತು ಎಸ್‌ಎಂಬಿಗಳು ಮತ್ತು ಕಿರಾಣಗಳಿಗೆ ಮೈಕ್ರೋ ಮಾರುಕಟ್ಟೆ ಮಟ್ಟದ ಬಿ2ಬಿ ಮತ್ತು ಬಿ2ಸಿ ಒಳನೋಟಗಳನ್ನು ತಮ್ಮ ಪ್ರದೇಶಕ್ಕೆ ನಿರ್ದಿಷ್ಟವಾದ ಗ್ರಾಹಕರ ಬೇಡಿಕೆಗಳನ್ನು ಉತ್ತಮ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಈ ಮೂಲಕ ಎಸ್‌ಎಂಬಿಗಳು ಮತ್ತು ಕಿರಾಣಗಳು

ಸರಿಯಾದ ಉತ್ಪನ್ನಗಳನ್ನು ಖರೀದಿಸಬಹುದು ಮತ್ತು ಮಾರಾಟ ಮಾಡಲು ಅತ್ಯುತ್ತಮ ಅವಕಾಶ ದೊರೆಯುತ್ತದೆ. ನಮ್ಮ ಈ ಉಪಕ್ರಮವು ಎಂಎಸ್ಎಂಇಗಳು, ಕಿರಾಣಗಳ ಸಮೃದ್ಧಿಗೆ ಕೊಡುಗೆ ನೀಡುತ್ತಿರುವುದನ್ನು ಮತ್ತು ಭಾರತದಲ್ಲಿ ಲಕ್ಷಾಂತರ ಹೊಸ ಮತ್ತು ಉತ್ತೇಜನಾಕಾರಿ ಜೀವನೋಪಾಯಗಳ ಅವಕಾಶಗಳನ್ನು ಸೃಷ್ಟಿಸುತ್ತಿರುವುದಕ್ಕೆ ಕೊಡುಗೆ ನೀಡುತ್ತಿರುವುದನ್ನು ಕಾಣಲು ನಾವು ಉತ್ಸುಕರಾಗಿದ್ದೇವೆ" ಎಂದು ತಿಳಿಸಿದರು.

ಈ ವರ್ಷಾಂತ್ಯದ ವೇಳೆಗೆ, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಗೃಹ ಮತ್ತು ಅಡುಗೆ ಮನೆ ಉತ್ಪನ್ನಗಳು ಹಾಗೂ ದಿನಸಿಯ ವಿಭಾಗಗಳನ್ನು ವಿಸ್ತರಿಸುವ ಯೋಜನೆಗಳನ್ನು ಹಾಕಿಕೊಂಡಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಗ್ರಾಹಕರ ಹಣದ ಹರಿವನ್ನು ಸಮರ್ಥವಾಗಿ ನಿರ್ವಹಿಸಲು ಪ್ರಮುಖ ಬ್ಯಾಂಕುಗಳು ಮತ್ತು ಎನ್‌ಬಿಎಫ್‌ಸಿಗಳ ಸಹಭಾಗಿತ್ವದಲ್ಲಿ ಸುಲಭವಾರ ರೀತಿಯಲ್ಲಿ ಸಾಲ ಸೌಲಭ್ಯಗಳನ್ನು ಹೊಂದಬಹುದಾಗಿದೆ. ಈ ಮೂಲಕ ವ್ಯಾಪಕವಾದ ಶ್ರೇಣಿಯ ಫ್ಲಿಪ್‌ಕಾರ್ಟ್ ಖಾತರಿಯ ಗುಣಮಟ್ಟದ ಉತ್ಪನ್ನಗಳು, ಸರಳ ಹಾಗೂ ಅನುಕೂಲಕರವಾದ ರೀತಿಯಲ್ಲಿ ತ್ವರಿತವಾಗಿ ಉತ್ಪನ್ನಗಳ ವಿರತಣೆಯನ್ನು ಪಡೆಯಬಹುದು. ಇದಕ್ಕೆ ಸಂಬಂಧಿಸಿದಂತೆ ಉತ್ಪನ್ನಗಳ ಆರ್ಡರಿನ ಟ್ರ್ಯಾಕಿಂಗ್ ವ್ಯವಸ್ಥೆಯನ್ನೂ ಪಡೆಯಬಹುದಾಗಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ತಂಡದ ಸದೃಢವಾದ ವ್ಯಾಪಾರೀಕರಣದ ಅನುಭವವನ್ನು ಪಾಲುದಾರರು ಮತ್ತಷ್ಟು ಪಡೆದುಕೊಳ್ಳಬಹುದು. ಈ ತಂಡ ಬ್ರ್ಯಾಂಡ್‌ಗಳೊಂದಿಗಿನ ಬಲವಾದ ಸಂಬಂಧವು ವ್ಯಾಪಾರ ಕೇಂದ್ರದಲ್ಲಿ ಕಿರಾಣ ಮತ್ತು ಎಂಎಸ್ಎಂಇಗಳ ಅಗತ್ಯಗಳನ್ನು ಪೂರೈಸಿ ವ್ಯಾಪಾರವನ್ನು ಅಭಿವೃದ್ಧಿಪಡಿಸಲು ನೆರವಾಗುತ್ತದೆ.

ಭಾರತ ಬೆಳೆಯುತ್ತಿರುವ ಮಾರುಕಟ್ಟೆಯಾಗಿದೆ ಮತ್ತು ಈ 12 ಹೊಸ ನಗರಗಳಿಗೆ ಸೇವೆಯನ್ನು ವಿಸ್ತರಣೆ ಮಾಡುವ ಮೂಲಕ ರಾಷ್ಟ್ರೀಯ ಡಿಜಿಟಲ್ ರೂಪಾಂತರದತ್ತ ದಿಟ್ಟ ಹೆಜ್ಜೆ ಇಟ್ಟಿದೆ. ಅಲ್ಲದೇ, ಫ್ಲಿಪ್‌ಕಾರ್ಟ್‌ನ ಪ್ರಬಲವಾದ ಸ್ವದೇಶಿ ತಂತ್ರಜ್ಞಾನದ ಸಾಮರ್ಥ್ಯಗಳು, ಗ್ರಾಹಕ ಇ–ಕಾಮರ್ಸ್ ವಿಭಾಗದಲ್ಲಿ ವ್ಯಾಪಕ ನಾಯಕತ್ವ ಹಾಗೂ ಭಾರತದ ಉದ್ಯಮದ ಬಗ್ಗೆ ಒಂದು ವಿಶಿಷ್ಟವಾದ ತಿಳುವಳಿಕೆಯನ್ನು ಹೆಚ್ಚಿಸುವ ಮೂಲಕ ಭಾರತದ ರೀಟೇಲ್ ಪರಿಸರ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವ ಕಿರಾಣಗಳು ಮತ್ತು ಎಂಎಸ್ಎಂಇಗಳು ಸುಲಭವಾಗಿ ವ್ಯವಹಾರವನ್ನು ನಡೆಸಬಹುದಾಗಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ದಯಮಾಡಿ https://flipkartwholesale.com/ ಇಲ್ಲಿಗೆ ಭೇಟಿ ನೀಡಿ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಆ್ಯಪ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution, with a registered customer base of over 250 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has inspired us to innovate on

many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, PhonePe, India's fastest growing digital payments platform, and now Flipkart Wholesale, the Flipkart Group will continue to steer the transformation of commerce in India through technology.

**For more information, please write to media@flipkart.com**